


بسم اللہِ الرّحمٰن الرّحیم

# ಪ್ರವಾದಿ ಚರಿತ್ರೆ – ಉಹುದ್ ಯುದ್ಧ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **29-12-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ۔ بِسْمِ اللّٰهِ الرَّحْمٰنِ الرَّحِيْمِ ۔

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔ اِيَّاكَ نَعْبُدُ وَاِيَّاكَ نَسْتَعِيْنُ ۔

اِهْدِنَا الصِّرَاطَ الْمُسْتَقِيْمَ ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಇಂದು ಸಹ ಉಹುದ್ ಯುದ್ಧದ ಇನ್ನಷ್ಟು ವಿವರಣೆಯನ್ನು ನೀಡುತ್ತೇನೆ. ಪ್ರಸ್ತಾಪಿಸಲಾದಂತೆ ಪರ್ವತ ಮಾರ್ಗ ಖಾಲಿಯಾದ ಕಾರಣದಿಂದ ಸತ್ಯನಿಷೇಧಿಗಳು ಹಿಂದಿನಿಂದ ದಾಳಿ ನಡೆಸಿದರು ಮತ್ತು ಯುದ್ಧದ ಪಗಡೆ ತಿರುಗಿತು. ಶತ್ರುಗಳ ದಾಳಿ ಅತ್ಯಂತ ಭಯಾನಕವಾಗಿತ್ತು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಸ್ಥಿರಚಿತ್ತತೆ, ಧೈರ್ಯ, ಶೌರ್ಯದ ಮಾದರಿಯ ಬಗ್ಗೆ ಹೀಗೆ ಬರೆಯಲಾಗಿದೆ: ಯುದ್ಧದ ದಾಳ ತಿರುಗಿದ ನಂತರ ಸಹಾಬಿಯರು ಮೂರ್ಛೆ ಹೋದವರಂತೆ ತಮ್ಮನ್ನು ತಾವೇ ನಿಯಂತ್ರಿಸಲು ಸಾಧ್ಯವಾಗದೇ ಹೋದಾಗ ಮತ್ತು ಗೊಂದಲಕ್ಕೆ ಗುರಿಯಾದಾಗ ಹಝ್ರತ್ ಪೈಗಂಬರ್(ಸ) ಆ ಗಡಿಬಿಡಿಯ ಮತ್ತು ನಾಲ್ಕೂ ಕಡೆಯಿಂದ ಶತ್ರುಗಳು ಒಟ್ಟು ಸೇರಿರುವ ಸ್ಥಿತಿಯಲ್ಲೂ ಸ್ಥಿರಚಿತ್ತತೆಯಿಂದ ಇದ್ದರು. ಸಹಾಬಿಯರು ಗಾಬರಿಗೊಂಡು ಪರಾರಿಯಾಗುತ್ತಾ ಇರುವುದನ್ನು ಕಂಡು ಅವರಿಗೆ ಕರೆ ನೀಡುತ್ತಾ ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಾ ಇದ್ದರು: ಎಲೈ ಜನರೇ ನನ್ನ ಬಳಿಗೆ ಬನ್ನಿರಿ, ಜನರೇ ನನ್ನ ಬಳಿಗೆ ಬನ್ನಿರಿ, ನಾನು ಅಲ್ಲಾಹನ ಸಂದೇಶವಾಹಕನಾಗಿರುವೆನು ಎಂದು ಹೇಳುತ್ತಿದ್ದರು. ಆ ಸಮಯದಲ್ಲಿ ಅವರ ಕಡೆಗೆ ಬಿಲ್ಲುಗಳನ್ನು ವರ್ಷಿಸಲಾಗುತ್ತಿತ್ತು.

ಒಂದು ವರದಿಯಲ್ಲಿ ಹೀಗೆ ಬಂದಿದೆ – ಅವರು ಉಚ್ಚ ಸ್ವರದಲ್ಲಿ ಹೀಗೆ ಹೇಳುತ್ತಿದ್ದರು:

**ಅನನ್ನಬಿಯು ಲಾ ಕಧಿಬ್ ಅನಬ್ನು ಅಬ್ದಿಲ್ ಮುತ್ತಲಿಬ್. ಅನಬ್ನುಲ್ ಅವಾತಿಕ್.**

ಅರ್ಥ: ನಾನು ಪ್ರವಾದಿಯಾಗಿರುವೆನು. ಅದರಲ್ಲಿ ಯಾವುದೇ ಸುಳ್ಳು ಇಲ್ಲ. ನಾನು ಅಬ್ದುಲ್ ಮುತ್ತಲಿಬ್‌ರ ಪುತ್ರನಾಗಿರುವೆನು. ನಾನು ಆತಿಕರ ಪುತ್ರನಾಗಿರುವೆನು.

ಈ ವಾಕ್ಯಗಳನ್ನು ಹಝ್ರತ್ ಪೈಗಂಬರ್(ಸ) ಹುನೈನ್ ಯುದ್ಧದಲ್ಲಿ ನುಡಿದಿದ್ದರು ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಹಾಗಿದ್ದರೂ ಇದೇ ಮಾತುಗಳನ್ನು ಹಝ್ರತ್ ಪೈಗಂಬರ್(ಸ) ಉಹುದ್ ಯುದ್ಧದಲ್ಲೂ ಹೇಳಿರಲು ಸಾಧ್ಯವಿದೆ. **ಅವಾತಿಕ್** ಎಂಬುದು ಆತಿಕದ ಬಹುವಚನವಾಗಿದೆ. **ಆತಿಕ** ಎಂಬ ಹೆಸರಿನ ಒಂದಕ್ಕಿಂತ ಹೆಚ್ಚಿನ ಮಹಿಳೆಯರು ಹಝ್ರತ್ ಪೈಗಂಬರ್(ಸ)ರ ಅಜ್ಜಿಯಂದಿರಲ್ಲಿ ಇದ್ದರು.

ಈ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆದಿರುವರು: ಈಗ ವಿಜಯ ಉಂಟಾಗಿದೆ ಎಂದು ಅಬ್ದುಲ್ಲಾಹ್ ಬಿನ್ ಜುಬೈರ್(ರ)ರ ಸಂಗಡಿಗರು ನೋಡಿದಾಗ ಅವರು ತಮ್ಮ ನೇತಾರರಾದ ಅಬ್ದುಲ್ಲಾಹ್‌ರೊಡನೆ – ಸೈನ್ಯದೊಂದಿಗೆ ಪಾಲ್ಗೊಳ್ಳಲು ನಮಗೂ ಅನುಮತಿ ಕೊಡಿರಿ ಎಂದು ಹೇಳಿದರು. ಅಬ್ದುಲ್ಲಾಹ್(ರ) ಅವರನ್ನು ತಡೆದರು. ಆದರೆ ಅವರು ಹೇಳಿದರು – ಪೂರ್ಣವಾದ ಸಮಾಧಾನದ ಸ್ಥಿತಿಯಾಗುವ ವರೆಗೂ ಪರ್ವತದ ಹಾದಿಯನ್ನು ಬಿಡಬೇಡಿರಿ ಎಂದಾಗಿತ್ತು ಹಝ್ರತ್ ಪೈಗಂಬರ್(ಸ) ಹೇಳಿದ ಮಾತಿನ ಉದ್ದೇಶ ಎಂದು ಹೇಳುತ್ತಾ ಅವರು ಕೆಳಗೆ ಇಳಿದರು. ಪರ್ವತದ ಹಾದಿಯ ಮೈದಾನ ಪೂರ್ಣವಾಗಿ ಖಾಲಿಯಾಗಿರುವುದನ್ನು ಖಾಲಿದ್ ಬಿನ್ ವಲೀದ್ ಕಂಡರು. ಆಗ ಅವರು ತಮ್ಮ ಸವಾರರನ್ನು ಮತ್ತು ಇಕ್ರಿಮ ಬಿನ್ ಅಬೂಜಹಲಿನ ಸಂಘವನ್ನು ಜೊತೆಗೆ ಸೇರಿಸಿಕೊಂಡು ಅಬ್ದುಲ್ಲಾಹ್ ಬಿನ್ ಜುಬೈರ್(ರ) ಮತ್ತು ಅವರ ಕೆಲವು ಸಂಗಡಿಗರನ್ನು ಕೆಲವೇ ಕ್ಷಣಗಳಲ್ಲಿ ಶಹೀದ್ ಮಾಡಿದರು. ಅನಂತರ ಅವರು ಇಸ್ಲಾಮಿನ ಸೈನ್ಯದ ಹಿಂದಿನಿಂದ ಅಚಾನಕ್ಕಾದ ದಾಳಿ ನಡೆಸಿದರು. ಹಝ್ರತ್ ಪೈಗಂಬರ್(ಸ) ಒಂದು ಎತ್ತರದ ಸ್ಥಳದಲ್ಲಿ ನಿಂತುಕೊಂಡು ಇದನ್ನೆಲ್ಲ ನೋಡುತ್ತಿದ್ದರು ಮತ್ತು ಮುಸ್ಲಿಮರಿಗೆ ಕರೆ ನೀಡುತ್ತಾ ಇದ್ದರು. ಆದರೆ ಈ ಗದ್ದಲದಲ್ಲಿ ಹಝ್ರತ್ ಪೈಗಂಬರ್(ಸ)ರ ಧ್ವನಿ ತಗ್ಗಿ ಹೋಗುತ್ತಿತ್ತು.

ಈ ಅಚಾನಕ್ಕಾದ ದಾಳಿಯಿಂದ ಮುಸ್ಲಿಮರು ಗಾಬರಿಗೊಂಡರು. ಎಲ್ಲಿಯ ವರೆಗೆ ಎಂದರೆ, ಈ ಮೂರ್ಛಾವಸ್ಥೆಯಲ್ಲಿ ಅವರು ಪರಸ್ಪರ ಹಲ್ಲೆ ನಡೆಸಲು ತೊಡಗಿದರು. ಸ್ವಂತವರಲ್ಲಿ ಮತ್ತು ಅನ್ಯರಲ್ಲಿ ವ್ಯತ್ಯಾಸವನ್ನು ತಿಳಿಯಲು ಅವರಿಗೆ ಸಾಧ್ಯವಾಗಲಿಲ್ಲ. ಹುದೈಫ(ರ)ರ ತಂದೆಯಾದ ಯಮಾನ್‌ರನ್ನು ಕೂಡ ತಪ್ಪಾಗಿ ಶಹೀದ್ ಮಾಡಿದರು. ಹಝ್ರತ್ ಪೈಗಂಬರ್(ಸ) ಅನಂತರ ಮುಸ್ಲಿಮರ ಕಡೆಯಿಂದ ಯಮಾನ್‌ರಿಗಾಗಿ ಪರಿಹಾರಧನವನ್ನು ನೀಡಲು ಬಯಸಿದ್ದರು. ಆದರೆ ಹುದೈಫ(ರ) ಪರಿಹಾರ ಪಡೆಯುವುದನ್ನು ನಿರಾಕರಿಸಿ ಹೀಗೆ ಹೇಳಿದರು: ಮುಸ್ಲಿಮರು ನನ್ನ ತಂದೆಯನ್ನು ಶಹೀದ್ ಮಾಡಿದ್ದನ್ನು ನಾನು ಕ್ಷಮಿಸುತ್ತೇನೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಸೂರತುನ್ನೂರಿನ 64ನೇ ವಚನದ ವ್ಯಾಖ್ಯಾನದಲ್ಲಿ ಇದರ ಕುರಿತು ಹೀಗೆ ಹೇಳುತ್ತಾರೆ: ಯಾರು ಈ ಪ್ರವಾದಿಯ ಆದೇಶಗಳಿಗೆ ವಿರುದ್ಧವಾಗಿ ನಡೆಯುತ್ತಾರೋ ಅವರು

ಅಲ್ಲಾಹನ ಕಡೆಯಿಂದ ಯಾವುದಾದರೂ ಆಪತ್ತು ಬಂದೆರಗುವುದರ ಬಗ್ಗೆ ಭಯಪಡಬೇಕಾಗಿದೆ. ಉಹುದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ)ರ ಆದೇಶಕ್ಕೆ ವಿರುದ್ಧವಾಗಿ ವರ್ತಿಸಿದ ಕಾರಣದಿಂದ ಇಸ್ಲಾಮಿನ ಸೈನ್ಯಕ್ಕೆ ಎಷ್ಟೊಂದು ನಷ್ಟವುಂಟಾಯಿತು ಎಂದು ನೋಡಿರಿ. ಸತ್ಯನಿಷೇಧಿಗಳ ಮೇಲೆ ವಿಜಯ ಗಳಿಸಿದ ನಂತರ ಮುಸ್ಲಿಮರಿಗೆ ಒಂದು ತಾತ್ಕಾಲಿಕ ಸೋಲಿನ ಸ್ಥಿತಿ ಉಂಟಾಗಲು ಕಾರಣವೇನೆಂದರೆ, ಕೆಲವು ಜನರು ಹಝ್ರತ್ ಪೈಗಂಬರ್(ಸ)ರ ಒಂದು ಆದೇಶಕ್ಕೆ ವಿರುದ್ಧವಾಗಿ ನಡೆದಿದ್ದರು ಮತ್ತು ಹಝ್ರತ್ ಪೈಗಂಬರ್(ಸ)ರ ನಿರ್ದೇಶನಕ್ಕೆ ವಿರುದ್ಧವಾಗಿ ಅವರ ನಿರ್ದೇಶನವನ್ನು ಸ್ವತಃ ವ್ಯಾಖ್ಯಾನಿಸಲು ಶುರುಮಾಡಿದರು.

ಹೃದಯಮಿಡಿತಕ್ಕೆ ಅನುಸಾರವಾಗಿ ನಾಡಿಮಿಡಿತ ಇರುವ ರೀತಿಯಲ್ಲಿ ಆ ಜನರು ಮುಹಮ್ಮದ್ ರಸೂಲುಲ್ಲಾಹ್(ಸ)ರನ್ನು ಅನುಸರಿಸುತ್ತಿದ್ದರೆ, ಮುಹಮ್ಮದ್ ರಸೂಲುಲ್ಲಾಹ್(ಸ)ರ ಆದೇಶವನ್ನು ಅನುಸರಿಸಲಿಕ್ಕಾಗಿ ಪೂರ್ತಿ ಲೋಕಜನರಿಗೆ ತಮ್ಮ ಜೀವಗಳನ್ನು ತ್ಯಾಗ ಮಾಡಬೇಕಾಗಿ ಬಂದರೂ ಅದು ಸಣ್ಣದಾದ ಸಂಗತಿಯಾಗಿದೆ ಎಂದು ಅವರು ಮನವರಿಕೆ ಮಾಡಿದ್ದರೆ, ಹಝ್ರತ್ ಪೈಗಂಬರ್(ಸ)ರ ಆದೇಶವನ್ನು ಸ್ವತಃ ವ್ಯಾಖ್ಯಾನಿಸದೇ ಆ ಪರ್ವತದ ಪ್ರದೇಶವನ್ನು ಬಿಡದೇ ಇರುತ್ತಿದ್ದರೆ, ಶತ್ರುಗಳಿಗೆ ಪುನಃ ದಾಳಿ ನಡೆಸಲು ಸಂದರ್ಭ ಲಭಿಸುತ್ತಿರಲಿಲ್ಲ ಮತ್ತು ಹಝ್ರತ್ ಪೈಗಂಬರ್(ಸ) ಹಾಗೂ ಅವರ ಸಹಾಬಿಯರಿಗೆ ಯಾವುದೇ ನಷ್ಟ ಉಂಟಾಗುತ್ತಿರಲಿಲ್ಲ. ಆದ್ದರಿಂದ ಅಲ್ಲಾಹನು ಹೇಳುತ್ತಾನೆ: ನೀವು ಆದೇಶಕ್ಕೆ ವಿರುದ್ಧವಾಗಿ ನಡೆದ ಕಾರಣದಿಂದ ಈ ನಷ್ಟ ಉಂಟಾಯಿತು. ಸೂರಃ ಕೌಸರಿನ ವ್ಯಾಖ್ಯಾನದಲ್ಲೂ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯ ಬಗ್ಗೆ ವಿಶದವಾಗಿ ಪ್ರಸ್ತಾಪಿಸಿದ್ದಾರೆ.

ಉಹುದ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರ ಸ್ಥಿರಚಿತ್ತತೆಯ ಬಗ್ಗೆ ಮಿಖ್‌ದಾದ್ ಬಿನ್ ಅಮ್ರ್(ರ) ಹೀಗೆ ಹೇಳುತ್ತಾರೆ: ಅಲ್ಲಾಹನಾಣೆ, ಮುಶ್ರಿಕರು ಕೊಲೆಗಳನ್ನು ನಡೆಸಿದರು ಮತ್ತು ಹಝ್ರತ್ ಪೈಗಂಬರ್(ಸ)ರನ್ನು ಗಾಯಗೊಳಿಸಿದರು. ಕೇಳಿರಿ, ಹಝ್ರತ್ ಪೈಗಂಬರ್(ಸ)ರನ್ನು ಸತ್ಯದೊಂದಿಗೆ ಕಳುಹಿಸಿದ ಅಲ್ಲಾಹನ ಆಣೆಯನ್ನು ಹಾಕಿಕೊಂಡು ಹೇಳುತ್ತೇನೆ, ಹಝ್ರತ್ ಪೈಗಂಬರ್(ಸ) ಒಂದು ಅಂಗುಲದಷ್ಟು ಕೂಡ ಹಿಂದೆ ಸರಿಯಲಿಲ್ಲ. ಅವರು ಶತ್ರುಗಳ ನೇರ ಮುಂದೆ ನಿಂತಿದ್ದರು. ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ತನ್ನ ಜಾಗದಲ್ಲಿ ಸ್ಥಿರವಾಗಿ ಇದ್ದರು ಮತ್ತು ಶತ್ರುಗಳಿಗೆ ನೇರವಾಗಿ ನಿಂತು ಹೋರಾಡುತ್ತಿದ್ದರು. ಅವರು ತನ್ನ ಬಿಲ್ಲಿನಿಂದ ಶತ್ರುಗಳ ಕಡೆಗೆ ಬಾಣಗಳನ್ನು ತೂರುತ್ತಿದ್ದರು. ಕೊನೆಗೆ ಬಾಣಗಳು ಮುಗಿದವು. ಆ ಬಿಲ್ಲನ್ನು ಖತಾದ ಬಿನ್ ನುಅ್‌ಮಾನ್ ಪಡೆದರು. ಸದಾ ಕಾಲ ಅದು ಅವರ ಬಳಿಯಲ್ಲೇ ಇತ್ತು.

ನಾಫಿಅ್ ಬಿನ್ ಜುಬೈರ್(ರ) ಹೇಳುತ್ತಾರೆ: ಮುಹಾಜಿರುಗಳಲ್ಲಿ ಒಬ್ಬ ವ್ಯಕ್ತಿ ಹೀಗೆ ಹೇಳುವುದನ್ನು ನಾನು ಆಲಿಸಿದ್ದೇನೆ, ಉಹುದ್ ಯುದ್ಧದಲ್ಲಿ ಎಲ್ಲೆಡೆಗಳಿಂದಲೂ ಬಾಣಗಳು ಬರುತ್ತಿದ್ದುವು ಮತ್ತು ಹಝ್ರತ್ ಪೈಗಂಬರ್(ಸ) ಅವುಗಳ ನಡುವೆ ಇದ್ದರು. ಎಲ್ಲ ಬಾಣಗಳು ಹಝ್ರತ್ ಪೈಗಂಬರ್(ಸ)ರಿಗೆ ತಟ್ಟದೇ ದೂರ ಹೋಗುತ್ತಿದ್ದುವು. ಅಬ್ದುಲ್ಲಾಹ್ ಬಿನ್ ಶಿಹಾಬ್ ಝೊಹ್‌ರಿ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರನ್ನು ನಮ್ಮಿಂದ ಸುರಕ್ಷಿತಗೊಳಿಸಲಾಗಿತ್ತು. ಅಲ್ಲಾಹನಾಣೆ, ನಾವು ನಾಲ್ವರು ಮಕ್ಕದಿಂದ ಹೊರಟಿದ್ದೆವು. ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಶಪಥ ಮಾಡಿಕೊಂಡಿದ್ದೆವು. ಆದರೆ ನಮಗೆ ಅವರ ಬಳಿಗೆ ತಲುಪಲು ಸಾಧ್ಯವಾಗಲಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಮಕ್ಕಾ ಜೀವಿತ ಒಂದು ವಿಸ್ಮಯಕರವಾದ ಮಾದರಿಯಾಗಿತ್ತು. ಒಂದು ರೀತಿಯಲ್ಲಿ ಅವರ ಪೂರ್ತಿ ಜೀವಿತ ಕಷ್ಟತೆಗಳಿಂದ ಸಾಗಿತ್ತು. ಉಹುದ್ ಯುದ್ಧದಲ್ಲಿ ಅವರು ಒಬ್ಬಂಟಿಗರಾಗಿದ್ದರು. ಶತ್ರುಗಳ ನಡುವೆ ಸುತ್ತುವರೆಯಲ್ಪಟ್ಟ ಸ್ಥಿತಿಯಲ್ಲೂ ತಾನು ಯಾರೆಂದು ಜನರಿಗೆ ತಿಳಿಸುತ್ತಿದ್ದರು. ಉಹುದ್ ಯುದ್ಧದಲ್ಲಿ ಹಝ್ರತ್ ಪೈಗಂಬರ್(ಸ) ಒಬ್ಬಂಟಿಯಾಗಿ ಉಳಿದ ರಹಸ್ಯವೇನೆಂದರೆ, ಹಝ್ರತ್ ಪೈಗಂಬರ್(ಸ)ರ ಧೈರ್ಯ ಜನರಿಗೆ ಗೊತ್ತಾಗಬೇಕು ಎಂದಾಗಿತ್ತು. ಆ ಸಂದರ್ಭದಲ್ಲಿ ಅವರು ಹತ್ತು ಸಾವಿರ ಶತ್ರುಗಳ ಮುಂದೆ ಒಬ್ಬಂಟಿಯಾಗಿ ನಿಂತಿದ್ದರು. ಆಗಲೂ 'ನಾನು ಅಲ್ಲಾಹನ ಪ್ರವಾದಿಯಾಗಿರುವೆನು' ಎಂದು ಅವರು ಘೋಷಿಸಿದರು. ಇಂತಹ ಮಾದರಿಯನ್ನು ತೋರಿಸಲು ಯಾವುದೇ ಪ್ರವಾದಿಗೆ ಸಂದರ್ಭ ಲಭಿಸಲಿಲ್ಲ.

(ಹುಝೂರ್ ಹೇಳುತ್ತಾರೆ:) ಉಹುದಿನಲ್ಲಿ ಮೂರು ಸಾವಿರದ ಸಂಖ್ಯೆಯಲ್ಲಿ ಶತ್ರುಗಳಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಎರಡೂ ಯುದ್ಧಗಳ ಬಗ್ಗೆ ಒಟ್ಟಾಗಿ ಪ್ರಸ್ತಾಪಿಸಿರಬಹುದು. ಅಹ್‌ಝಾಬ್ ಯುದ್ಧದಲ್ಲೂ ಹತ್ತು ಸಾವಿರದಷ್ಟು ಸತ್ಯನಿಷೇಧಿಗಳಿದ್ದರು. ಬೇರೆ ಯುದ್ಧಗಳಲ್ಲೂ ಶತ್ರುಗಳು ಸಾಕಷ್ಟು ಸಂಖ್ಯೆಯಲ್ಲಿದ್ದರು. ಹೇಗಿದ್ದರೂ ಸತ್ಯನಿಷೇಧಿಗಳ ಮುಂದೆಯೂ ಹಝ್ರತ್ ಪೈಗಂಬರ್(ಸ) ಒಬ್ಬಂಟಿಯಾಗಿ ನಿಂತರು ಎಂಬುದನ್ನು ಹೇಳಿ ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಪೈಗಂಬರ್(ಸ)ರ ಧೈರ್ಯ ಮತ್ತು ಅವರ ಮಾದರಿಯನ್ನು ಸಾಬೀತುಗೊಳಿಸುತ್ತಿದ್ದಾರೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಯಾವುದೇ ವಸ್ತುವಿನಲ್ಲಿ ಶಕ್ತಿಯನ್ನು ತುಂಬಿಸಲು ಅಲ್ಲಾಹನಿಗೆ ಸಾಮರ್ಥ್ಯವಿದೆ. ಅಲ್ಲಾಹನು ತನ್ನ ದರ್ಶನದ ಶಕ್ತಿಯನ್ನು ಅವನು ಯಾರೊಡನೆ ಸಂಭಾಷಣೆ ನಡೆಸುತ್ತಾನೋ ಅವರಲ್ಲಿ ತುಂಬಿಸಿದನು. ಈ ಸಂಭಾಷಣೆಗಾಗಿಯೇ ಪ್ರವಾದಿಗಳು ತಮ್ಮ ಜೀವಗಳನ್ನು ಅರ್ಪಿಸಿದರು. ಲೌಕಿಕ ಪ್ರೇಮಿಯಾದ ಓರ್ವನಿಗೆ ಈ ರೀತಿ ಮಾಡಲು ಸಾಧ್ಯವೇ? ಈ ಸಂಭಾಷಣೆಯ ಕಾರಣದಿಂದ ಈ ಮೈದಾನದಲ್ಲಿ ಕಾಲಿರಿಸಿದ ಪ್ರವಾದಿಗಳಲ್ಲಿ ಯಾರೂ ಹಿಂದೆ ಸರಿಯಲಿಲ್ಲ ಮತ್ತು ಅನಿಷ್ಟೆ ತೋರಿಸಲಿಲ್ಲ. ಎಂದರೆ, ಮಾಡಿದ ವಾದದಲ್ಲಿ ಸ್ಥಿರವಾಗಿ ನಿಲ್ಲುತ್ತಾರೆ.

ಉಹುದ್ ಯುದ್ಧದ ಆ ಘಟನೆಗೆ ಸಂಬಂಧಿಸಿ ಅನೇಕರು ವ್ಯಾಖ್ಯಾನಿಸಿದ್ದಾರೆ. ಆದರೆ ಸತ್ಯವೇನೆಂದರೆ, ಆ ಸಮಯದಲ್ಲಿ ಅಲ್ಲಾಹನ ಪ್ರತಾಪ ಪ್ರಕಟಗೊಳ್ಳುತ್ತಿತ್ತು. ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲದೇ ಬೇರೆ ಯಾರಿಗೂ ಅದನ್ನು

ಸಹಿಸುವ ಶಕ್ತಿ ಇರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ) ಅಲ್ಲೇ ನಿಂತರು ಮತ್ತು ಇತರ ಸಹಾಬಿಯರು ಅಸ್ಥಿರಗೊಂಡರು.

ಹಝ್ರತ್ ಪೈಗಂಬರ್(ಸ)ರ ಜೀವಿತದಲ್ಲಿ ಕಾಣುವಂತಹ ಸತ್ಯಸಂಧತೆ ಮತ್ತು ನಿಷ್ಠೆಯ ಉದಾಹರಣೆ ಬೇರೆ ಎಲ್ಲೂ ಕಾಣಲು ಸಾಧ್ಯವಿಲ್ಲ. ಅದೇ ರೀತಿ ಅವರಿಗೆ ಲಭಿಸಿದ ದೈವಿಕ ಸಹಾಯಗಳ ಉದಾಹರಣೆ ಸಹ ಎಲ್ಲೂ ಕಾಣಲು ಸಾಧ್ಯವಲ್ಲ.

(ಖುತ್ಬದ ಕೊನೆಯಲ್ಲಿ ಹುಝೂರ್ ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು:)

(ಮೊತ್ತಮೊದಲಾಗಿ ಜಮಾಅತಿನ ದೀರ್ಘಕಾಲೀನ ಸೇವಕ ಮತ್ತು ಮುಬಲ್ಲಿಗ್ ಆದ ಸನ್ಮಾನ್ಯ ಡಾಕ್ಟರ್ ಜಲಾಲ್ ಶಮ್ಸ್ ಸಾಹಿಬ್ ನಿಧನಗೊಂಡ ಬಗ್ಗೆ ಪ್ರಸ್ತಾಪಿಸುತ್ತಾ ಹುಝೂರ್ ಹೇಳಿದರು:) ಅವರ ಜನಾಝ ನಮಾಝನ್ನು ನಿನ್ನೆ ನಿರ್ವಹಿಸಿದ್ದೆ. ಇಂದು ಅವರ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ಅವರು ಯೋಗ್ಯ, ಸಮರ್ಥ, ಸರಳ ಮತ್ತು ನಿಷ್ಠಾವಂತ ವಖ್ಫೇ ಝಿಂದಗಿ ಆಗಿದ್ದರು. ಜರ್ಮನಿ ಮತ್ತು ಬ್ರಿಟನಿನಲ್ಲಿ ಅವರಿಗೆ ಸೇವೆಗಳನ್ನು ಮಾಡಲು ಸೌಭಾಗ್ಯ ಲಭಿಸಿತ್ತು. 2002ರಲ್ಲಿ ತುರ್ಕಿಯಲ್ಲಿ ಅವರಿಗೆ ಇಬ್ಬರು ಸಂಗಡಿಗರ ಜೊತೆಗೆ ತಬ್ಲೀಗ್ ಮಾಡಿದ ಅಪರಾಧಕ್ಕೆ ನಾಲ್ಕುವರೆ ತಿಂಗಳಿಗೆ ಸೆರೆಮನೆ ವಾಸದ ಸೌಭಾಗ್ಯ ಕೂಡ ಲಭಿಸಿತ್ತು.

(ಇತರ ಮೂರು ದಿವಂಗತರ ಬಗ್ಗೆ ಹುಝೂರ್ ಪ್ರಸ್ತಾಪಿಸಿದರು ಮತ್ತು ಅವರ ಜನಾಝ ಗ್ಹಾಯಿಬ್ ನಿರ್ವಹಿಸುವುದಾಗಿ ಹೇಳಿದರು. ಅವರಲ್ಲಿ ದಿವಂಗತ ಮುಹಮ್ಮದ್ ಇಬ್ರಾಹೀ ಭಾಂಬ್ಡಿ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸುತ್ತಾ ಹುಝೂರ್ ಹೇಳಿದರು:) ಅವರು 106 ವರ್ಷ ಪ್ರಾಯವನ್ನು ಪಡೆದರು. ಅವರು ಬಹಳ ಸ್ನೇಹಮಯಿ ಮತ್ತು ಪ್ರೀತಿಸುವವರಾಗಿದ್ದರು. ನಾನು ಸಹ ಅವರ ಶಿಷ್ಯನಾಗಿದ್ದೆ. ಅವರ ಕಟ್ಟುನಿಟ್ಟಿನ ಶಿಸ್ತಿನಲ್ಲಿ ಸಹಾನುಭೂತಿ ಮತ್ತು ಸುಧಾರಣೆ ಉದ್ದೇಶವಿರುತ್ತಿತ್ತು.

(ಅನಂತರ ಘಾನದ ಯೂಸುಫ್ ಉಜಾರೆ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸುತ್ತಾ ಹುಝೂರ್ ಹೇಳಿದರು:) ಅವರು ಬಹಳ ನಿಷ್ಠಾವಂತ ಅಹ್ಮದಿಯಾಗಿದ್ದರು. ಜಮಾಅತಿನ ಅನೇಕ ಹುದ್ದೆಗಳಲ್ಲಿ ಇದ್ದರು ಮತ್ತು ಸೇವೆಗಳನ್ನು ಮಾಡಲು ಸೌಭಾಗ್ಯವನ್ನು ಪಡೆದರು.

(ಅನಂತರ ಅಲ್‌ಹಾಜ್ ಉಸ್ಮಾನ್ ಬಿನ್ ಆದಮ್ ಸಾಹಿಬ್‌ರ ಬಗ್ಗೆ ಹುಝೂರ್ ಪ್ರಸ್ತಾಪಿಸಿದರು:) ದಿವಂಗತರು ವಸಿಯ್ಯತ್ ಮಾಡಿದ್ದರು ಮತ್ತು ಅತ್ಯಂತ ನಿಷ್ಠಾವಂತ ಅಹ್ಮದಿಯಾಗಿದ್ದರು. ಅವರು ಹಜ್ಜ್ ಕರ್ಮಾನುಷ್ಠಾನದ ಸೌಭಾಗ್ಯವನ್ನು ಪಡೆದರು. ಪವಿತ್ರ ಖುರ್‌ಆನಿನ ಘಾಂಟಿ ಭಾಷೆಯಲ್ಲಿ ತರ್ಜುಮೆಯ ಕೆಲಸದಲ್ಲಿ ಅವರಿಗೆ ಹಿರಿದಾದ ಪಾತ್ರವಿದೆ.

(ದಿವಂಗತರಿಗಾಗಿ ಮಗ್ಫಿರತಿನ ದುಆ ಮಾಡುತ್ತಾ ಹುಝೂರ್ ಹೇಳಿದರು:) ಅಲ್ಲಾಹನು ಅವರ ಮಕ್ಕಳಿಗೂ ಅವರ ಹೆಜ್ಜೆ ಗುರುತುಗಳಲ್ಲಿ ಚಲಿಸಲು ಸೌಭಾಗ್ಯ ನೀಡಲಿ.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***
*At, **'Masjid Mubarak'**, Islamabad, Tilford, UK.* On 29-12-2023
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim |***Layout**:* U Basheer Ahmad
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon